ದಾರಿಹೋಕರನ್ನು ತನ್ನತ್ತ ಸೆಳೆದು ನಿಲ್ಲಿಸುವ ಮಾದಕತೆಯಿತ್ತು. ಪ್ರಭಂಜನನನ್ನು ಪರೀಕ್ಷಿಸಲೆಂದೋ ಅಥವಾ ಅವನನ್ನು ಉನ್ಮಾದಗೊಳಿಸಲೆಂದೋ ಬಟ್ಟೆಕೊಳ್ಳುವ ನೆಪದಲ್ಲಿ ಕರೆತಂದಿದ್ದ ವಸುಮತಿ ಒಳಗೆ ಬಟ್ಟೆ ಹುಡುಕುತ್ತಿದ್ದರೂ ಅವಳ ಒಂದು ಕಣ್ಣು ಕತ್ರಿನಾಳ ಫೋಟೊದ ಎದುರು ನಿಂತಿದ್ದ ಗಂಡನ ಮೇಲೆಯೇ ನೆಟ್ಟಿತ್ತು. ಪ್ರಭಂಜನ ತನ್ನೆದುರಿನ ಆಳೆತ್ತರದ ಕತ್ರಿನಾಳ ಭಾವಚಿತ್ರವನ್ನೆ ತದೇಕಚಿತ್ತನಾಗಿ ನೋಡುತ್ತಿದ್ದವನು ಒಮ್ಮೆ ಕತ್ರಿನಾಳ ಎಡಕ್ಕೂ ಮತ್ತೊಮ್ಮೆ ಬಲಕ್ಕೂ ಮಗದೊಮ್ಮೆ ಮೇಲೆ ಕೆಳಗೆ ಹೀಗೆ ಕ್ಷಣ ಕ್ಷಣಕ್ಕೂ ದೃಷ್ಟಿ ಬದಲಿಸುತ್ತಿದ್ದ. ಅದಕ್ಕೆ ತಕ್ಕಂತೆ ತಾನು ನಿಂತ ಭಂಗಿಯನ್ನೂ ಬದಲಿಸುತ್ತ ವಸುಮತಿಯಲ್ಲಿ ಆಸೆ ಭರವಸೆಗಳ ಮಹಾಪೂರವನ್ನೇ ಹುಟ್ಟಿಸಿದ. ಅಂಗಡಿಯೊಳಗಿಂದ ಹೊರಬಂದು ಪ್ರಭಂಜನನನ್ನೆ ದಿಟ್ಟಿಸಿ ನೋಡಿದವಳಿಗೆ ಅವನಲ್ಲೇನೋ ಬದಲಾವಣೆಯಾದಂತೆ ಭಾಸವಾಯಿತು. ಅವನನ್ನು ವಾಸ್ತವಕ್ಕೆಳೆಯುತ್ತ, 'ಏನೂ ಪ್ರೊಫೆಸರ್ ಸಾಹೇಬರು ಇನ್ನೊಂದಿಷ್ಟು ಹೊತ್ತು ನಾನು ಬರುವುದು ತಡವಾಗಿದ್ದರೆ ಕತ್ರಿನಾಳನ್ನು ತಿಂದೇ ಬಿಡ್ತಿದ್ದಿರೇನೋ' ಎಂದು ನಗೆಯಾಡಿದಳು. 'ಅಲ್ಲ ವಸು, ಹೀಗೆ ಬಟ್ಟೆಯಿಲ್ಲದ ಅರೆಬೆತ್ತಲೆ ದೇಹ ಪ್ರದರ್ಶಿಸಿದರೆ ನೋಡುವವರಲ್ಲಿ ಆಸಕ್ತಿ ಹುಟ್ಟಿಸಬಹುದು ಅಂತ ಭಾವಿಸ್ತಾರಲ್ಲ, ಎಂಥ ಮೂರ್ಖರಿವರು. ಸೌಂದರ್ಯ ಇರೋದು ಬಿಚ್ಚಿ ತೋರಿಸೊದರಲ್ಲಲ್ಲ. ಮುಚ್ಚಿಟ್ಟಾಗ ಮನಸ್ಸಿನಲ್ಲಿ ಮೂಡುವ ಕುತೂಹಲ, ಕಲ್ಪನೆ ಬಿಚ್ಚಿಟ್ಟಾಗ ಇರಲ್ಲ ನೋಡು. ಬಿಚ್ಚಿದ ಆ ಕ್ಷಣಕ್ಕೆ ಇರೋದು ಇಷ್ಟೇನಾ ಅನ್ನೊ ನಿರ್ಲಿಪ್ತತೆ ಹುಟ್ಟುತ್ತೆ' ಪ್ರಭಂಜನನ ಮಾತು ಕೇಳುತ್ತ ವಸುಮತಿಗೆ ಅದೇ ಆಗ ಮೂಡಿದ್ದ ಭರವಸೆಗಳೆಲ್ಲ ಒಂದೊಂದಾಗಿ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವಂತೆ ಭಾಸವಾಗಿ ಕಂಗಳು ಹನಿಗೂಡಿದವು.

★★★

ಬ್ಯಾಂಕಿನ ಕೇಂದ್ರ ಕಚೇರಿಯ ಮುಖ್ಯಸ್ಥರಾದ ಸುಬ್ರತೋ ಬ್ಯಾನರ್ಜಿ ಕರ್ನಾಟಕಕ್ಕೆ ಭೇಟಿನೀಡಿದ್ದ ಪ್ರಯುಕ್ತ ಬ್ಯಾಂಕ್‌ನ ಸಭಾಂಗಣದಲ್ಲಿ ಅವರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬ್ಯಾಂಕಿನ ಉದ್ಯೋಗಿಗಳು ಮಾತ್ರವಲ್ಲದೆ ಊರಿನ ಗಣ್ಯರು, ನಾಗರಿಕರು ಕೂಡ ಪಾಲ್ಗೊಂಡು ಸಭಾಂಗಣ ಪ್ರೇಕ್ಷಕರಿಂದ ತುಂಬಿತ್ತು. ವೇದಿಕೆಯ ಮೇಲೆ ಸುಬ್ರತೋ ಬ್ಯಾನರ್ಜಿ ಮತ್ತು ಅವರ ಪತ್ನಿ ಮೃಣಾಲಿನಿ ಬ್ಯಾನರ್ಜಿ ಆಸೀನರಾಗಿದ್ದರು. ಮೃಣಾಲಿನಿ ಬಂಗಾಳಿ ಭಾಷೆಯಲ್ಲಿ ಹಲವಾರು ಕತೆ ಕಾದಂಬರಿಗಳನ್ನು ಬರೆದು ಜನಪ್ರಿಯ ಬರಹಗಾರ್ತಿಯೆಂದು ಹೆಸರು ಮಾಡಿದ್ದರು. ಅವರ ಅನೇಕ ಕತೆಗಳು ಕನ್ನಡಕ್ಕೂ ಅನುವಾದಗೊಂಡು ಮೃಣಾಲಿನಿ ಕನ್ನಡಿಗರಿಗೂ ಪರಿಚಿತರಾಗಿದ್ದರು. ಅವರನ್ನು ಕಣ್ಣಾರೆ ನೋಡಲೆಂದೇ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸನ್ಮಾನ ಸ್ವೀಕರಿಸಿದ ಸುಬ್ರತೋ ಬ್ಯಾನರ್ಜಿ ಎಲ್ಲರಿಗೂ ಧನ್ಯವಾದ ಹೇಳಿದರು. ತಾವು ಸವೆಸಿದ ಬದುಕಿನ ದಾರಿಯನ್ನು ನೆನಪಿಸಿಕೊಂಡು ಭಾವುಕರಾದರು. ಬಾಳಿನ ಈ ಪಯಣದಲ್ಲಿ ಜೊತೆಗೆ ನಿಂತು ಸಹಕರಿಸಿದ ಎಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸಿದರು. ತಮ್ಮ ಪತ್ನಿ ಮೃಣಾಲಿನಿಯನ್ನು ಬಾಯಿತುಂಬ ಹೊಗಳಿದರು. ಬ್ಯಾಂಕಿನ ವ್ಯಾವಹಾರಿಕ ಜಗತ್ತಿನ ಸುಬ್ರತೋ, ಸೃಜನಶೀಲ ಕ್ಷೇತ್ರದಲ್ಲಿನ ಮೃಣಾಲಿನಿ ಬದುಕಿನ ಈ ಪಯಣದಲ್ಲಿ ಜೊತೆಯಾದದ್ದೇ ಒಂದು ಸೋಜಿಗ ಎಂದು ಅಚ್ಚರಿಪಟ್ಟರು. 'ಪರಸ್ಪರ ನಂಬಿಕೆ, ಗೌರವ, ವಿಶ್ವಾಸಗಳೇ ದಾಂಪತ್ಯದ ಯಶಸ್ಸಿನ ತಳಹದಿಗಳು. ನಾನು ಮೃಣಾಲಿನಿಯ ಬೆಳವಣಿಗೆಗೆ ನೀರೆರೆದೆ, ಅವಳು ನನ್ನ ಬೆಳವಣಿಗೆಗೆ ಒತ್ತಾಸೆಯಾಗಿ ನಿಂತಳು. ನಾನು ಅವಳ ಅಭಿರುಚಿ, ಆಸಕ್ತಿಯನ್ನು ಗೌರವಿಸಿದೆ, ಅವಳು ನನ್ನ ವ್ಯಾವಹಾರಿಕ ಪ್ರಜ್ಞೆಯನ್ನು ವಿಸ್ತರಿಸಿದಳು. ದಾಂಪತ್ಯ ಎನ್ನುವುದು ಕೇವಲ ದೇಹದ ಆಕರ್ಷಣೆ ಮಾತ್ರವಲ್ಲ. ಕಾಮವೇ ದಾಂಪತ್ಯದ ಬದುಕಿನ ಪರಮಾವಧಿಯೂ ಮತ್ತು ಅಂತಿಮ ಸತ್ಯವೂ ಅಲ್ಲ. ಧರ್ಮೇಚ, ಅರ್ಥೇಚ, ಕಾಮೇಚ, ಮೋಕ್ಷೇಚ ಅಹಮ್ ಇವಾಮ್ ನಾತಿ ಚರಾಮಿ ಎಂದು ಸಪ್ತಪದಿ ತುಳಿದ ದಾಂಪತ್ಯದಲ್ಲಿ ಕಾಮ ಸಂತಾನಭಿವೃದ್ಧಿಗೆ